# ಚಿತ್ರದುರ್ಗದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
## ಸ್ಪೆಷಲ್ ಕೇಸ್(ಪಿ.ಸಿ) ಸಂಖ್ಯೆ: 06/2016

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಕೃಷ್ಣಮೂರ್ತಿ ಎಂ. | ಪಿಡಬ್ಲ್ಯೂ.09 |
| ತಂದೆಯ ಹೆಸರು | : | ಮಾರಪ್ಪ | ಸಿಡಬ್ಲ್ಯೂ.20 |
| ವಯಸ್ಸು | : | 52 ವರ್ಷ | ಪ್ರಮಾಣ ವಚನ ಬೋಧಿಸಿದ |
| ಉದ್ಯೋಗ | : | ಕೆ.ಎಸ್.ಪಿ.ಹೆಚ್. ಮತ್ತು ಐ.ಡಿ.ಸಿ ಶಿವಮೊಗ್ಗ | ದಿನಾಂಕ: 11.10.2018 |
| ವಾಸಸ್ಥಳ | : | ಶಿವಮೊಗ್ಗ . | |

## ಎಸ್‌ಪಿಪಿ ರವರಿಂದ: ಮುಖ್ಯ ವಿಚಾರಣೆ:

ದಿ: 30.04.2015 ರಿಂದ 20.05.2017 ರ ವರೆಗೆ ನಾನು ಚಿತ್ರದುರ್ಗದ ಸಹಾಯಕ ಕಾರ್ಯಪಾಲಕ ಅಭಿಯಂತರವರ ಕಛೇರಿ, ನಂ.1 ನೇ ಲೋಕೋಪಯೋಗಿ ಉಪ ವಿಭಾಗದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ . ಅದೇ ರೀತಿ ಸಿಡಬ್ಲ್ಯೂ-19 ಟೋಗ್ಯಾನಾಯ್ಕ ಕಿರಿಯ ಅಭಿಯಂತರರು ಅಂತ ಕೆಲಸ ಮಾಡಿರುತ್ತಾರೆ . ಚಿತ್ರದುರ್ಗ ಲೋಕಾಯುಕ್ತ ಪೊಲೀಸರು ಮೊ ನಂ 5/2014 ರಲ್ಲಿ ನಮ್ಮ ಕಛೇರಿಗೆ ದಿ: 29.07.2015 ರಂದು ಪತ್ರ ಬರೆದು ಆರೋಪಿ-1 ಇವರ ಹೆಂಡತಿಯಾದ ಶ್ರೀಮತಿ ರಾಜೇಶ್ವರಿ ಅಂದರೆ 2 ನೇ ಆರೋಪಿ ಇವರ ಹೆಸರಿನಲ್ಲಿರುವ ಮನೆಯ ಆಸ್ತಿ ಮೌಲ್ಯ ಮಾಡಲು ತಿಳಿಸಿದ್ದರು . ಆ ಪ್ರಕಾರ ನಾನು ಸಿಡಬ್ಲ್ಯೂ-19 ಟೋಗ್ಯಾನಾಯ್ಕ, ಕಿರಿಯ ಇಂಜಿನಿಯರ್ ಇವರಿಗೆ ವಿಷಯ ತಿಳಿಸಿ ಚಿತ್ರದುರ್ಗ ಪಟ್ಟಣದ ಯಂಗಮನಕಟ್ಟೆಯ ಶಿಕ್ಷಕರ ಕಾಲೋನಿ ಖಾತೆ ನಂ 10888 , ಅಸೆಸ್‌ಮೆಂಟ್ ನಂ 18673/1 ಆಸ್ತಿಯ ಮೌಲ್ಯಮಾಪನ ಮಾಡಿಸಿದ್ದೆನು . ಆ ಪ್ರಕಾರ ಸಿಡಬ್ಲ್ಯೂ-19 ಇಂಜಿನಿಯರ್ ಇವರು ಆಸ್ತಿಯನ್ನು ಪರಿಶೀಲಿಸಿ ಅಲ್ಲಿ ಕಟ್ಟಲು ಬಳಸಿದ ಕಲ್ಲು , ಮಣ್ಣು , ಸಿಮೆಂಟ್ , ಕಬ್ಬಿಣ , ಕಟ್ಟಿಗೆ ಇತ್ಯಾದಿಗಳನ್ನು ಪರಿಶೀಲಿಸಿ ವರದಿ ಕೊಟ್ಟಿರುತ್ತಾರೆ . ಅದನ್ನು

ನಾನು ಗುರುತಿಸುತ್ತೇನೆ . ಅದನ್ನು ನಿಪಿ–**13** ಅಂತ ಗುರುತಿಸಲಾಯಿತು . ಸದರಿ ವರದಿಯನ್ನು ನಾನು ಲೋಕಾಯುಕ್ತ ಇನ್ಸ್ ಪೆಕ್ಟರ್ ಇವರಿಗೆ ದಿಃ **18.09.2015** ರಂದು ಪತ್ರದ ಮೂಲಕ ಕಳುಹಿಸಿರುತ್ತೇನೆ. ಅದನ್ನು ನಿಪಿ–**14** ಅಂತ ಗುರುತಿಸಲಾಯಿತು . ಸದರಿ ಸಿಡಬ್ಲ್ಯೂ–**19** ಇಂಜಿನಿಯರ್ ಕೊಟ್ಟಂತಹ ವರದಿಯನ್ನು ನಾನು ಖುದ್ದಾಗಿ ಪರಿಶೀಲಿಸಿ ಸರಿ ಅಂತ ಕಂಡ ಮೇಲೆ ಲೋಕಾಯುಕ್ತ ಪೊಲೀಸರಿಗೆ ಕೊಟ್ಟಿದ್ದೇನೆ .

**ಆರೋಪಿತರ ಪರ ಶ್ರೀ ಎಸ್.ಹೆಗಡೆ ವಕೀಲರಿಂದಃ ಪಾಟೀ ಸವಾಲುಃ**

ನಾನು ಚಿತ್ರದುರ್ಗದಲ್ಲಿರುವ ಯಂಗಮ್ಮನಕಟ್ಟೆಯಲ್ಲಿರುವ ಮನೆಯನ್ನು ಖುದ್ದಾಗಿ ನೋಡಿರುವುದಿಲ್ಲ . ಅಲ್ಲಿ ಮನೆ ಕಟ್ಟುವ ಕಾಲಕ್ಕೆ ಯಾವ ಗುಣಮಟ್ಟದ ವಸ್ತುಗಳನ್ನು ಉಪಯೋಗಿಸಿದ್ದಾರೆ ಅಂತ ನನಗೆ ಗೊತ್ತಿಲ್ಲ . ಸಿಡಬ್ಲ್ಯೂ–19 ಟೋಗ್ಯಾನಾಯ್ಕ, ಇಂಜಿನಿಯರ್ ಕೊಟ್ಟಂತಹ ವರದಿಯನ್ನು ನೋಡಿ ನಾನು ಕವರಿಂಗ್ ಲೆಟರ್ ಜೊತೆಗೆ ಪೊಲೀಸರಿಗೆ ಕಳುಹಿಸಿದ್ದೇನೆ . ಅಷ್ಟು ಬಿಟ್ಟರೆ ಈ ಕೇಸಿನಲ್ಲಿ ನಾನು ಬೇರೆ ಏನು ಮಾಡಿಲ್ಲ . ಸಾಮಾನ್ಯವಾಗಿ ಎಸ್.ಆರ್.ನಲ್ಲಿ ಶೇಕಡಾ 10 ರಷ್ಟು ಗುತ್ತಿಗೆದಾರರ ಲಾಭಾಂಶ ಮತ್ತು ಓವರೆಡ್ ಚಾರ್ಜಸ್ ಶೇಕಡಾ 10 ರಷ್ಟು ಆಗುತ್ತದೆ ಎನ್ನುವುದು ನಿಜ . ಆ ಎಲ್ಲಾ ಶೇಕಡಾ 20 ರಷ್ಟು ಖರ್ಚು ಎಸ್.ಆರ್. ಬೆಲೆಯಲ್ಲಿ ಸೇರಿರುತ್ತವೆ ಎನ್ನುವುದು ನಿಜ . ಅದೇ ರೀತಿ ಸಿಮೆಂಟ್ ಕಟ್ಟಡದ ನೀರುಣಿಸುವಿಕೆ ಅಂದರೆ ಕ್ಯೂರಿಂಗ್ ಬಗ್ಗೆ ಶೇಕಡಾ 2 ರಷ್ಟು , ಸಾಮಗ್ರಿಗಳಿಗೆ ಭದ್ರತೆಯನ್ನು ಒದಗಿಸಲು ಶೇಕಡಾ 1 ರಷ್ಟು ಎಸ್.ಆರ್. ದರದಲ್ಲಿ ಕೂಡಿರುತ್ತದೆ ಎನ್ನುವುದು ನಿಜ .

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಎಸ್.ಬಿ. ವಸ್ತ್ರಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.